# ಹೆಂಡತಿ ಪ್ರಾಣ ಹಿಂಡುತಿ!?

ಪುರಂದರದಾಸರ ದೇವರನಾಮವೊಂದರಲ್ಲಿ 'ಹೆಂಡತಿ ಪ್ರಾಣ ಹಿಂಡುತಿ। ಕೊಂಡ ದೊಡ್ಡ ಕೋತಿಯಂತೆ ಕುಣಿ ಕುಣಿಸುತ್ತಿ। ...ಮೃತ್ಯು ದೇವತೆಯಂತೆ ಮನೆಯೊಳಗಿರುತ್ತಿ। ಮಾತು ಮೀರುತ್ತಿ। ಇಲ್ಲದ್ದು ಬೇಡುತ್ತಿ ಸುಳ್ಳು ಮಾತಾಡುತ್ತಿ।... ಹಿರಿಯತನಕೋಗುತ್ತಿ ಗರುವಿಕೆ ಮಾಡುತ್ತಿ। ನೆರೆ ಹೊರೆಯವರ ಕೂಡ ಬಡೆದಾಡುತ್ತಿ' –ಎಂದೆಲ್ಲಾ ಪತ್ನಿಯ ವ್ಯಕ್ತಿತ್ವವನ್ನು ವರ್ಣಿಸಲಾಗಿದೆ. ಪುರಂದರದಾಸರು ಅಪಾರ ಲೋಕಜ್ಞಾನವನ್ನು ಪಡೆದವರಾಗಿದ್ದರು. ಅಂತಹವರು ಪತ್ನಿಯ ಬಗ್ಗೆ ಅತ್ಯಂತ ಲೌಕಿಕ ಅರ್ಥದಲ್ಲಿ ಮಾತನಾಡುತ್ತಾರೆಂದರೆ ಆಶ್ಚರ್ಯವಾಗುತ್ತದೆ. ಅವರ ಬದುಕಿನಲ್ಲಿ ಅವರ ಪತ್ನಿ ಅವರ ಅಂತರಂಗ ತಿಳಿವಿನ ಎಚ್ಚರಕ್ಕೆ ಕಾರಣಳಾದಳೆಂಬ ದಂತಕತೆಯೂ ಇದೆ. ಆದುದರಿಂದ ಸಾಮಾನ್ಯಾರ್ಥದಲ್ಲಿ ಪುರಂದರರು 'ಹೆಂಡತಿ'ಯೆಂಬ ಅರ್ಥವನ್ನು ಸೂಚಿಸಿ ಹೇಳುತ್ತಿಲ್ಲವೆಂದು ಭಾಸವಾಗುತ್ತದೆ. ನಮ್ಮಲ್ಲಿ ಭಕ್ತ–ಭಗವಂತ ಸಂಬಂಧವನ್ನು ಹೆಣ್ಣು ಗಂಡಿನ ಸಂಬಂಧಕ್ಕೆ ಅನ್ವಯಿಸಿ ಹೇಳುವ ಪದ್ಧತಿಯಿದೆ. ಬಹುಶಃ ಪುರಂದರರಿಗೆ ಅವರಿಗಿಂತ ಮುನ್ನಿನ ವಚನ ಸಂಸ್ಕೃತಿಯ ಪ್ರಭಾವ ಪರೋಕ್ಷವಾಗಿ ಆಗಿರಲು ಸಾಧ್ಯವಿದೆ. ವಚನ ಸಂಸ್ಕೃತಿಯ 'ಶರಣ ಸತಿ–ಲಿಂಗ ಪತಿ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ತಮ್ಮೊಳಗಿನ ಆತ್ಮವನ್ನು ಅವರು 'ಹೆಂಡತಿ'ಯೆಂದು ಪರಿಭಾವಿಸಿ, ಅದು ಅಧ್ಯಾತ್ಮದ ಬೆಳಕಿನತ್ತ ಚಲಿಸಲೆಂದು ಛೇಡಿಸುವ ಧಾಟಿಯಲ್ಲಿ ಈ ಕೀರ್ತನೆಯನ್ನು ಕಟ್ಟಿರಬಹುದು.

ಆದರೆ ನಮ್ಮ ಬದುಕಿನ ಜನ ಸಮುದಾಯದಲ್ಲಿ 'ಹೆಂಡತಿ'ಗೆ ಎರಡನೆಯ ಸ್ಥಾನವನ್ನು ನೀಡಿರುವುದು ಸತ್ಯವಾದ ಸಂಗತಿ. ಇಂದೂ ಕೂಡ ಕುಟುಂಬ ವ್ಯವಸ್ಥೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಂತಿಮ ಹಕ್ಕು ಪುರುಷನಿಗೇ ಇರುವುದು. ಮನೆಯ ಒಳಗೆ ಮತ್ತು ಹೊರಗೆ ಪುರುಷಪಾರಮ್ಯ ಮೆರೆಯುವುದು ನಮ್ಮ ಸಂಸ್ಕೃತಿಯ ನಿರಂತರತೆಯ ಅಂಶವಾಗಿದೆ. ಅದರಿಂದ ಆಧುನಿಕ ವಿದ್ಯೆ ಕೂಡ ಸ್ತ್ರೀಯನ್ನು ಸಮಾನತೆಯ ನೆಲೆಗೆ ತರಲು ಅಸಮರ್ಥವಾಗಿದೆ. ಮೇಲು ನೋಟಕ್ಕೆ ಆಧುನಿಕ ವಿದ್ಯೆ ಭಾರತೀಯ ಸಮಾಜದಲ್ಲಿ ಸ್ತ್ರೀ ಸಬಲೀಕರಣವನ್ನು ಸಾಧಿಸಿದೆಯೆಂದು ಕಂಡುಬಂದರೂ, ಅವಳು ಆರ್ಥಿಕ ಸ್ವಾತಂತ್ರ್ಯದ ಬೆಳಕಿನಲ್ಲಿ ನಿಜವಾದ ಅಸ್ತಿತ್ವವನ್ನು ಕಂಡುಕೊಳ್ಳುವಲ್ಲಿ ವಿಫಲವಾಗಿರುವಂತೆ ತೋರುತ್ತದೆ. ಆರ್ಥಿಕ ಸ್ವಾತಂತ್ರ್ಯ ಭೋಗ ಮೂಲ ತುಡಿತಗಳನ್ನು ಮತ್ತು ಕೊಳ್ಳುಬಾಕತನವನ್ನು ತಣಿಸಬಹುದೇ ಹೊರತು ಸಾಮಾಜಿಕ ಮತ್ತು ಕೌಟುಂಬಿಕ ಸಮಾನತೆಯನ್ನು ತಂದುಕೊಡಲು ವಿಫಲವಾಗಿದೆಯೆಂಬುದನ್ನು ವಿವೇಕದ ಮೂಲಕ, ವಿವೇಚನೆಯ ಮೂಲಕ ಕಂಡುಕೊಳ್ಳಬೇಕಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಪುರುಷನು ಸ್ತ್ರೀ ವಿದ್ಯೆಯ ಮೂಲಕ ಪಡೆದುಕೊಂಡಿರುವ ಆರ್ಥಿಕ ಸಬಲವನ್ನು ಮತ್ತು ಸುಖವನ್ನು ಪರೋಕ್ಷವಾಗಿ ಕಬಳಿಸುತ್ತಿರುವುದು ಕಂಡುಬರುತ್ತದೆ. ಅವಳನ್ನು ಅವಳು ಆಧುನಿಕ ಯುಗದಲ್ಲಿ ಪಡೆದಿರುವ ವಿದ್ಯೆಯಿಂದಾಗಿಯೇ ಇಮ್ಮಡಿಯಾಗಿ ದುಡಿಯುವಂತೆ ಮಾಡಿದೆಯೆಂಬ ಸತ್ಯವನ್ನು ಅಲ್ಲಗೆಳೆಯಲಾಗುತ್ತದೆ. ಅವಳು ಕಲಿತ ವಿದ್ಯೆ ಅವಳಿಗೆ ಹೊರ ಜಗತ್ತಿನ ದುಡಿಮೆಯ ಹಕ್ಕನ್ನು ಗಳಿಸಿಕೊಟ್ಟಿರುವುದು ನಿಜ. ಆದರೆ ಅವಳನ್ನು ಅವಳ ಮನೆಯೊಳಗಿನ ದುಡಿಮೆಯಿಂದ ಮುಕ್ತಗೊಳಿಸಿಲ್ಲ. ನಿಜವಾದ ಅರ್ಥದಲ್ಲಿ ಭಾರತೀಯ ಸಮಾಜದಲ್ಲಿ ಕಲಿತ ಕುಟುಂಬದಲ್ಲೂ ಹಾಗೂ ಗಂಡ ಹೆಂಡತಿ ಸಮಾನವಾಗಿ ದುಡಿಯುವ ಸಂದರ್ಭದಲ್ಲೂ ದುಡಿಮೆಯ ಹಂಚಿಕೆಯಾಗಿಲ್ಲ. ದುಡಿಮೆಯ ಭಾರ ಪೂರ್ಣವಾಗಿ ಹೆಂಡತಿಯ ಮೇಲೆ ಬಿದ್ದಿದೆ. ಇದರಿಂದಾಗಿ ಅವಳು ದೈಹಿಕವಾಗಿ– ಮಾನಸಿಕವಾಗಿ ಜರ್ಜರಿತಳಾಗುತ್ತಿದ್ದಾಳೆ; ಹೊರಗಿನ–ಒಳಗಿನ ದುಡಿಮೆಯ ಒತ್ತಡಕ್ಕೆ ಸಿಲುಕಿದ್ದಾಳೆ. ಅಸ್ವಸ್ತತೆಯ ಹಾದಿಯಲ್ಲಿ ಅವಳು ನರಳುವಂತಾಗಿದೆ. ಆದರೆ ಪುರುಷ ಏಕದುಡಿಮೆಯಿಂದ ವಿರಾಮ ಮತ್ತು ನೆಮ್ಮದಿಯ ಸುಖವನ್ನು ಅನುಭವಿಸುತ್ತಿದ್ದಾನೆ. ಈ ಸೂಕ್ಷ್ಮಗಳು ಹೆಂಡತಿಯನ್ನು ದುಡಿಯುವ, ಹೆರುವ ಕೆಲಸಗಾರ್ತಿಯನ್ನಾಗಿಯೇ ಇಟ್ಟಿವೆಯೆಂಬ ಸತ್ಯವನ್ನು ಹೊರಗೆಡಹುತ್ತವೆ. ಈ ಅಂಶವನ್ನು ಹೆಣ್ಣು ಇಂದು ವಿಶ್ಲೇಷಣೆ ಮಾಡಬೇಕಾಗಿದೆ.

ನಮ್ಮಲ್ಲಿ ದಂಪತಿಗಳು ನಿಜವಾಗಿಯೂ 'ಜೋಡಿ'ಗಳಲ್ಲ. 'ಜೋಡಿಗಳು' ಎಂಬ ಮಾತಿನಲ್ಲಿ ಸಮಾನತೆಯ ಅರ್ಥವಿದೆ. ಗಂಡು ಹೆಣ್ಣನ್ನು 'ನೋಡಿ' ಅವರನ್ನು 'ಜೋಡಿ' ಮಾಡುವ ಕ್ರಿಯೆಯನ್ನೇ 'ಮದುವೆ'ಯೆಂದು ವ್ಯಾಖ್ಯಾನಿಸಬೇಕು– ಭಾರತೀಯ ಸಂದರ್ಭದಲ್ಲಿ! ಹೀಗೆ 'ಜೋಡಿ'ಗಳನ್ನು ಮಾಡುವ ಮದುವೆಗಳು ಲಿಂಗ ಸಮಾನತೆಯನ್ನೂ, ಪರಸ್ಪರ ಗೌರವ ನೀಡುವಿಕೆಯನ್ನು ಮಾನ್ಯ ಮಾಡಬೇಕು. ಆದರೆ ಅದು ನಮ್ಮ ನಡುವೆ ಸಾಧಿತವಾಗುತ್ತಿಲ್ಲ. ಮದುವೆಯಾದ ಮೇಲೆ ಹೆಂಡತಿಯ ಹೊರ–ಒಳಗಿನ ದುಡಿಮೆ ನಿರಂತರವಾಗಿ ನಡೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಭಾರತೀಯ ದುಡಿಯುವ ವರ್ಗದಲ್ಲಿ, ರೈತಾಪಿ ವಲಯದಲ್ಲಿ ಹೆಣ್ಣು ದುಡಿಯುವ ಆಳೇ ಸೈ! ಆ ದುಡಿಮೆಯ ಫಲದ ಸಿಂಹಪಾಲು ಮನೆಯ ಪುರುಷನಿಗೆ! ಅವಳು ಎಂದಿಗೂ ಸೆರಗ ಹಿಂದಿನ ಬದುಕನ್ನೇ ಅನುಭವಿಸಬೇಕು.

ನಮ್ಮ ಸಮಾಜದಲ್ಲಿ ಹೆಂಡತಿ ಇಂದಿಗೂ 'ಬೆಟರ್ ಹಾಫ್' ಆಗಿಲ್ಲದಿರುವುದು ನಮ್ಮ ಬದುಕಿನ ವ್ಯಂಗ್ಯವೂ ಹೌದು, ಸ್ತ್ರೀ ಹೋರಾಟದ ಆತಂಕವೂ ಹೌದು.

■ **ಶಿಕಾಕು**

## ಮಾತೇ ಮುತ್ತು

★ ರೋಗ ಕುದುರೆ ಮೇಲೆ ಬರುತ್ತದೆ; ಕಾಲು ನಡಿಗೆಯಲ್ಲಿ ಹೋಗುತ್ತದೆ.
–ಬ್ರಿಟಿಷ್ ಗಾದೆ

★ ನೀನು ಕಳೆದುಕೊಂಡ ಪ್ರತಿಯೊಂದಕ್ಕೂ ಬದಲಾಗಿ ಮತ್ತೇನೋ ಸಿಕ್ಕಿದೆ; ನಿನಗೆ ಸಿಕ್ಕಿದ ಪ್ರತಿಯೊಂದಕ್ಕೂ ಬದಲಾಗಿ ಏನೋ ಕಳೆದುಹೋಗಿದೆ.
–ಎಮರ್‌ಸನ್

★ ಚಿತ್ರ ಕಲಾವಿದ ನೀಡಿದ ಶೀರ್ಷಿಕೆಯನ್ನು ನೋಡುಗನೂ ಒಪ್ಪಿಕೊಳ್ಳಬೇಕು ಎಂದೇನಿಲ್ಲ. ನೋಡುಗ ಕಲಾಕೃತಿಯನ್ನು ನೋಡುತ್ತ ಹೋದಂತೆ ಶೀರ್ಷಿಕೆಯು ತನ್ನಿಂದ ತಾನೇ ಹುಟ್ಟಿಕೊಳ್ಳುತ್ತದೆ. ಅದು ನೋಡಗನ ಸ್ವತಂತ್ರ ಅರ್ಥ ಸಾಧ್ಯತೆ. ಅದನ್ನು ಕಲಾವಿದ ಪ್ರಶ್ನಿಸುವಂತಿಲ್ಲ.
–ಆರ್.ಎಂ.ಹಡಪದ

★ ಶಾಂತನೂ, ಸುಖಿಯೂ ಆದವನು ವಯಸ್ಸಿನ ಭಾರ ಕಾಣನು: ಹಾಗಿಲ್ಲದವನಿಗೆ ಯೌವನ, ಮುಪ್ಪು ಎರಡೂ ಹೊರೆಯೇ.
–ಪ್ಲೇಟೊ

★ ಕಲಿಸಿದ ವಿದ್ಯೆ ಮರೆಯಬೇಡ. ಕಲಿಸಿದ್ದನ್ನು ಬೆಳೆಸಿಕೋ. ಎಷ್ಟು ಬೆಳೆಸಿದರೂ ಕೊನೆ ಕಾಣದಷ್ಟು ಅಪಾರವಾದದ್ದು ಈ ವಿದ್ಯೆ.
–ತ.ರಾ.ಸು.

★ ಯಾರ ಯೋಗ್ಯತೆಯನ್ನೂ ಅವರ ಲೋಪಗಳ ಆಧಾರದಿಂದ ನಿರ್ಣಯಿಸಬಾರದು.
–ಸ್ವಾಮಿ ವಿವೇಕಾನಂದ

★ ಜನರೊಡನೆ ವ್ಯವಹರಿಸುವುದು, ಅವರನ್ನು ಒಲಿಸಿಕೊಳ್ಳುವುದು ಒಂದು ದೊಡ್ಡ ಕಲೆ. ಅದು ಕೇವಲ ಅಭ್ಯಾಸ ಬಲದಿಂದ ಬರತಕ್ಕದ್ದೂ ಅಲ್ಲ. ಕಲಿಸದೆ ಬರುವ ವಿದ್ಯೆ.
–ಎಂ.ಆರ್.ಶ್ರೀನಿವಾಸಮೂರ್ತಿ

★ ಪ್ರಪಂಚವನ್ನು ಪ್ರೀತಿಸುವುದೆಂದರೆ ಪರಮಾತ್ಮನನ್ನು ಪ್ರೀತಿಸಿದಂತೆಯೇ. ಆದುದರಿಂದ ಪರಮಾತ್ಮನ ಪ್ರೇಮವೆಂದರೆ ಪ್ರಪಂಚ ಪ್ರೇಮ.
–ಸಿದ್ಧೇಶ್ವರ ಸ್ವಾಮೀಜಿ

★ ಏನೂ ಕಳೆದುಕೊಳ್ಳದೆ ಏನನ್ನೂ ಪಡೆಯಲಾರೆ.
–ರಷ್ಯನ್ ಗಾದೆ

★ ಗುರಿಯ ದೃಷ್ಟಿ ಇಲ್ಲದ ವಾದ ಎಷ್ಟೇ ತರ್ಕಬದ್ಧವಾದರೂ ಅರ್ಥಹೀನ.
–ಟಾಲ್‌ಸ್ಟಾಯ್

★ ಮಳೆಯ ಸಂಗಡ ವಾದ ಹೂಡಿ ಲಾಭ ಇಲ್ಲ; ಕೊಡೆ ಬಿಚ್ಚುವುದೇ ಲೇಸು.
–ಜೆ.ಆರ್.ಲೋವಲ್

★ ವಿಜ್ಞಾನದ ಬೇರನ್ನೇ ಕಿತ್ತೊಗೆಯುವಂತಹದು– 'ಗುಟ್ಟು'
–ಆಪನ್ ಹೀಮರ್

★ ಸರಸ್ವತಿಯ ವೀಣೆ ನುಡಿಸಬಲ್ಲ ಸ್ವರಕ್ಕೆ ಆದಿಯಿಲ್ಲ, ಅಂತ್ಯವಿಲ್ಲ.
–ಮಾಸ್ತಿ ವೆಂಕಟೇಶ್ ಅಯ್ಯಂಗಾರ್

★ ನಲವತ್ತು ಯೌವನದ ಮುಪ್ಪಾದರೆ, ಐವತ್ತು ಮುಪ್ಪಿನ ಯೌವನ.
–ಫ್ರೆಂಚ್ ಗಾದೆ